# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

## ಒ.ಎಸ್.ನಂಃ 39/21

ಡಿಡಬ್ಲ್ಯುಃ –1

ದಿನಾಂಕಃ 14.11.2025ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ವಕೀಲರಾದ ಶ್ರೀ. ಎಂ ಕೆ ಎಸ್ ರವರಿಂದಃ–

ಸರ್ವೆ ನಂಬರ್ 151/1 ರಲ್ಲಿ ರಸ್ತೆ ಮಾಡಬೇಕೆಂದು ಹೇಳಿ ಪಂಚಾಯತಿಯವರಿಗೆ ಅರ್ಜಿ ನೀಡಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸರ್ವೆ ನಂಬರ್ 153/1 ರಲ್ಲಿ ಇರುವ ರಸ್ತೆ ಖಾಸಗಿ ರಸ್ತೆ ಎಂದರೆ ಸರಿ. ಅದೇ ರೀತಿ ವಾದಿಯವರ ಸರ್ವೆ ನಂಬರ್ 154/3 ರಲ್ಲಿ ಇರುವ ರಸ್ತೆ ಕೂಡ ಖಾಸಗಿ ರಸ್ತೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 153/1 ರಲ್ಲಿ ರಸ್ತೆ ಮಾಡಬೇಕೆಂದು ಹೇಳಿ ಪಂಚಾಯತಿಯವರಿಗೆ ನೀವೇನಾದರೂ ಕೇಳಿಕೊಂಡಿದ್ದಿರಾ ಎಂದರೆ ಸಾಕ್ಷಿ ಹೌದು ಕೇಳಿಕೊಂಡಿದ್ದೇನೆ ಆದರೆ ಅರ್ಜಿ ಕೊಟ್ಟಿಲ್ಲ ಎನ್ನುತ್ತಾರೆ. ನೀವು ಕೇಳಿಕೊಂಡಮೇರೆಗೆ ಪಂಚಾಯತಿಯಿಂ ಪಿ ಡಿ ಒ ರವರಾಗಲಿ, ಸರ್ವೆ ಅಧಿಕಾರಿಗಳಾಗಲಿ ಅಧಿಕೃತವಾಗಿ ರಸ್ತೆ ಮಾಡಲು ಸರ್ವೆ ಮಾಡಿದ್ದಾರಾ ಎಂದರೆ ಸಾಕ್ಷಿ ಹೌದು ಮಾಡಿದ್ದಾರೆ ಎನ್ನುತ್ತಾರೆ. ಆ ರೀತಿ ಸರ್ವೆ ಮಾಡುವಾಗ ನಾನು ಕೂಡ ಹಾಜರಿದ್ದೆ. ಹಾಗಾದರೆ ಯಾವ ಸರ್ವೆಯರ್ ರವರು ಸರ್ವೆ ಮಾಡಿದರು ಎಂದು ಹೇಳಬಲ್ಲಿರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಸರ್ವೆಯನ್ನು ಮುಖ್ಯ ರಸ್ತೆಯಿಂದ ನನ್ನ ಮನೆಗೆ ಹೋಗುವ ದಾರಿಯಲ್ಲಿ ಸರ್ವೆ ಮಾಡಿರುತ್ತಾರೆ, ಅಂದರೆ ಸರ್ವೆ ನಂಬರ್ 153/1 ರಲ್ಲಿ ಮಾಡಿರುತ್ತಾರೆ. 5ನೇ ಪ್ರತಿವಾದಿ ಸುಬ್ಬಯ್ಯ ನನ್ನ ಚಿಕ್ಕಪ್ಪನ ಮಗ. ಮಾಳೆಯಂಡ ಕುಟುಂಬದಲ್ಲಿ ನಿಮ್ಮ ತಂದೆ ಚಂಗಪ್ಪ ಹಾಗೂ ನಿಮ್ಮ ತಂದೆಯ ತಮ್ಮ ನಾಣಯ್ಯ ಅವರ ನಡುವೆ ಕುಟುಂಬದ ಆಸ್ತಿಗಳ ವಿಭಾಗ ಆಗಿದೆಯಾ ಎಂದರೆ ಸಾಕ್ಷಿಯು ವಿಭಾಗ ಆಗಿರುತ್ತದೆ ಎನ್ನುತ್ತಾರೆ. ಸದರಿ ವಿಭಾಗದಲ್ಲಿ ನನ್ನ ತಂದೆಯ ಭಾಗಕ್ಕೆ ಸರ್ವೆ ನಂಬರ್ 153/1 ರಲ್ಲಿ 3 ಎಕರೆ 90 ಸೆಂಟ್ ಬಂದಿರುತ್ತದೆ ಹಾಗೂ ಅದೇ ಸರ್ವೆ ನಂಬರ್ ನಲ್ಲಿ ನನ್ನ ಚಿಕ್ಕಪ್ಪ ನಾಣಯ್ಯ ಅವರಿಗೆ 7 ಎಕರೆ ಅವರ ಭಾಗಕ್ಕೆ ಹೋಗಿರುತ್ತದೆ, ನನ್ನ ತಂದೆಗೆ ಸರ್ವೆ ನಂಬರ್ 156/3 ರಲ್ಲಿ 5 ಎಕರೆ ಬಂದಿರುತ್ತದೆ ಮತ್ತು ಸರ್ವೆ ನಂಬರ್ 156/5 ರಲ್ಲಿ 5 ಎಕರೆ ಜಮೀನು ಬಂದಿರುತ್ತದೆ. ಸದರಿ ವಿಭಾಗದಂತೆ ಕಂದಾಯ ದಾಖಲೆಗಳು(ಆರ್ ಟಿ ಸಿ) ನನ್ನ ತಂದೆಯ ಹೆಸರಿಗೆ ಆಗಿರುತ್ತದೆ. ನಿಪಿ–7ರಲ್ಲಿರುವ ಜಮೀನು ವಿಭಾಗದಲ್ಲಿ ನನ್ನ ತಂದೆಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ 149/3 ರಲ್ಲಿ ನನ್ನ ತಂದೆಯ ಭಾಗಕ್ಕೆ 2 ಎಕರೆ ಜಮೀನು ಬಂದಿರುತ್ತದೆ. ಸರ್ವೆ ನಂಬರ್ 149/3 ರಲ್ಲಿ ಖರಾಬು ಇರುವುದಿಲ್ಲ. ನಿಪಿ–8 ದಾಖಲೆ ಪ್ರಕಾರ ಸರ್ವೆ ನಂಬರ್ 153/1 –6 ಎಕರೆ 19 ಸೆಂಟ್ ಜಾಗ ಸುಬ್ಬಯ್ಯ ಬಿನ್ ನಾಣಯ್ಯ(5ನೇ ಪ್ರತಿವಾದಿ) ಅವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರ್ 153/1 ರಲ್ಲಿ ಕೂಡ ಖರಾಬು

ಇರುವುದಿಲ್ಲ ಎಂದರೆ ಸರಿ. ನಿಪಿ-8 ದಾಖಲೆಯ ಪ್ರಕಾರ ಸದರಿ ಜಮೀನು 5ನೇ ಪ್ರತಿವಾದಿಗೆ ವಿಭಾಗದ ಮೂಲಕ ಬಂದಿರುತ್ತದೆ ಎಂದರೆ ಸರಿ. ನನಗೆ ಸರ್ವೆ ನಂಬರ್ 153/1 ರಲ್ಲಿ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸಾಕ್ಷಿಯು ನನಗೆ ಸರ್ವೆ ನಂಬರ್ ನಲ್ಲಿ 3 ಎಕರೆ 90 ಸೆಂಟ್ ಜಾಗ ನಮಗೆ ಸೇರಿದ್ದಾಗಿದೆ ಎನ್ನುತ್ತಾರೆ. ಸರ್ವೆ ನಂಬರ್ 153/1 ರಲ್ಲಿ ನಾನು ಮಾಡಿದ್ದೇನೆ ಎಂದು ಹೇಳುವ ಯಾವುದೇ ಖಾಸಗಿ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಯಾವುದು ಎಂದು ನೀವು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ತಿಳಿದುಕೊಂಡಿದ್ದೇನೆ, ವಾದಿಯು ಸರ್ವೆ ನಂಬರ್ 153/1 ರಲ್ಲಿರುವ ರಸ್ತೆಗೆ ಈ ದಾವೆ ಹಾಕಿರುತ್ತಾರೆ. ವಾದಿಯು ಈ ದಾವೆಯನ್ನು ಸರ್ವೆ ನಂಬರ್ 154/3 ರ ಬಾಪ್ತು ಹಾಕಿರುತ್ತಾರೆ, ಈ ವಿಚಾರ ನನಗೆ ಗೊತ್ತಿದ್ದರೂ ಕೂಡ ನಾನು ಸರ್ವೆ ನಂಬರ್ 153/1 ಕ್ಕೆ ದಾವೆ ಹಾಕಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ರಸ್ತೆ ಹಾಗೂ ಕಣದ ಫೊಟೋಗಳನ್ನು ನೋಡಿದರೆ ನೀವು ಗುರುತಿಸಬಲ್ಲಿರಾ ಎಂದರೆ ಸಾಕ್ಷಿ ಗುರುತಿಸಬಲ್ಲೆ ಎನ್ನುತ್ತಾರೆ. ನಿಪಿ-2 ಫೊಟೋದಲ್ಲಿ ಕಾಣುವ ಮುಖ್ಯ ರಸ್ತೆಯ ಪಕ್ಕ ಹಾಕಿರುವ ಜೆಲ್ಲಿ ಅದು ಸರ್ವೆ ನಂಬರ್ 154/3 ರಲ್ಲಿ ಇರುವಂತಹ ಖಾಸಗಿ ರಸ್ತೆಯನ್ನು ಪಂಚಾಯತಿರವರು ಸಾರ್ವಜನಿಕ ರಸ್ತೆ ಮಾಡಲು ಹಾಕಿರುವಂತಹ ಜೆಲ್ಲಿ ಎಂದರೆ ಸಾಕ್ಷಿಯು ಸರ್ವೆ ನಂಬರ್ 153/1 ರಲ್ಲಿ ಹಾಕಿರುವ ಜೆಲ್ಲಿ ಎನ್ನುತ್ತಾರೆ. ನಿಪಿ-1 ಮತ್ತು 4 ಫೋಟೋಗಳಲ್ಲಿ ಇರುವ ಖಾಸಗಿ ರಸ್ತೆ ವಾದಿಯವರ ಕಣಕ್ಕೆ ಸೇರುವ ರಸ್ತೆ ಎಂದರೆ ಸಾಕ್ಷಿಯು ಸರ್ವೆ ನಂಬರ್ 153/1 ರಲ್ಲಿ ಇರುವ ರಸ್ತೆಯಿಂದ ವಾದಿಯವರು ಅವರ ಕಣಕ್ಕೆ ಹೋಗಲು ಮಾಡಿಕೊಂಡಿರುವ ರಸ್ತೆ ಎನ್ನುತ್ತಾರೆ. ಸರ್ವೆ ನಂಬರ್ 153/1 ರಲ್ಲಿ ನಾವು ಮಾಡಿಕೊಂಡಿರುವ ಖಾಸಗಿ ರಸ್ತೆ ಬೇರೆಯಾಗಿದ್ದು, ವಾದಿಯವರ ಸರ್ವೆ ನಂಬರ್ 154/3 ರಲ್ಲಿ ಮಾಡಿಕೊಂಡಿರುವ ರಸ್ತೆ ಬೇರೆ ಎಂದರೆ ಸರಿ. ಸರ್ವೆ ನಂಬರ್ 154/3 ರ ಜಮೀನಿನಲ್ಲಿ ನನಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿ. ವಾದಿ ಮಾಡಿರುವ ಸರ್ವೆ ನಂಬರ್ 154/3 ರ ರಸ್ತೆಯಲ್ಲಿ ನನಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸಾಕ್ಷಿಯು ರಸ್ತೆ ಇರುವುದು ಸರ್ವೆ ನಂಬರ್ 153/1 ರಲ್ಲಿ ಎನ್ನುತ್ತಾರೆ. ನಮ್ಮ ಮನೆಗೆ ಹೋಗಲು ರಸ್ತೆ ಇದ್ದರೂ ಕೂಡ ನಾವು ದಾವಾ ಬಿ ಶೆಡ್ಯೂಲ್ ರಸ್ತೆಯಲ್ಲೇ ಓಡಾಡುತ್ತಿದ್ದೀರಿ ಎಂದರೆ ಸಾಕ್ಷಿಯು ನಾವು ನಮ್ಮ ಮನೆಗೆ ಮಾಡಿಕೊಂಡಿರುವ ರಸ್ತೆಯಲ್ಲೇ ಓಡಾಡುತ್ತಿದ್ದೇವೆ. ನಮ್ಮ ಮನೆಯು ಸರ್ವೆ ನಂಬರ್ 153/1 ರಲ್ಲಿ ಇದೆ. ನಿಮ್ಮ ಮನೆಗೆ ಹೋಗುವ ರಸ್ತೆ ಎಲ್ಲಿಂದ ಎಲ್ಲಿಯವರೆಗೆ ಇದೆ ಎಂದರೆ ನಿಪಿ-12 ಎ ಅಲ್ಲಿರುವ ಮುಖ್ಯ ರಸ್ತೆಯಿಂದ ನಮ್ಮ ಮನೆಗೆ ಮಣ್ಣಿನ ರಸ್ತೆ ಇದೆ. ಸದರಿ ರಸ್ತೆಯನ್ನು ನಾನು ಕಡಂಗದಲ್ಲಿ ಮಾಡಿಕೊಂಡಿದ್ದೇನೆ ಎಂದರೆ ಸಾಕ್ಷಿಯು ಅಲ್ಲಿ ಕಡಂಗ ಇರುವುದಿಲ್ಲ ಎನ್ನುತ್ತಾರೆ. ಕಡಂಗದಿಂದ ಸರ್ವೆ ನಂಬರ್ 153/1 ಕ್ಕೆ ಹೋಗುವ ರಸ್ತೆ ಎಷ್ಟು ದೂರದಲ್ಲಿ ಇರುತ್ತದೆ ಎಂದರೆ ಸುಮಾರು 500 ಮೀಟರ್ ಇರುತ್ತದೆ ಎನ್ನುತ್ತಾರೆ. ಸದರಿ ಕಡಂಗದಿಂದ ಹೋಗುವ ರಸ್ತೆ ನಮ್ಮ ಮನೆಯವರೆಗೆ ಮಾತ್ರ ಹೋಗುತ್ತದೆ ಎಂದರೆ ಇಲ್ಲ ನಮ್ಮ ಮನೆಯಿಂದ ನಮ್ಮ ಗದ್ದೆಯವರೆಗೂ ಹೋಗುತ್ತದೆ. ನಮ್ಮ ಸದರಿ ಗದ್ದೆಯು ಯಾವ ಸರ್ವೆ ನಂಬರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ನಾನು ಮೇಲೆ ಹೇಳಿರುವಂತೆ ಸರ್ವೆ ನಂಬರ್ 153/1

ರಲ್ಲಿ ನಮ್ಮ ಗದ್ದೆಗೆ ಹೋಗಲು ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಖಾಸಗಿ ರಸ್ತೆಯ ವಿಚಾರವಾಗಿ ನನ್ನ ಹಾಗೂ ವಾದಿಯ ನಡುವೆ ವೈ ಮನಸ್ಸು ಇತ್ತು ಹಾಗೂ ವಾದಿ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ದೂರ ಸಹ ನೀಡಿದ್ದರು ಎಂದರೆ ಸರಿಯಲ್ಲ. ವಾದಿ ನನ್ನ ವಿರುದ್ಧ ದೂರು ಕೊಟ್ಟ ಮೇಲೆ ನಾನು ಪೊಲೀಸ್ ಠಾಣೆಗೆ ಹೋಗಿ ಮುಚ್ಚಳಿಕೆ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಮುಚ್ಚಳಿಕೆ ಬರೆದಕೊಟ್ಟಿದ್ದರೂ ಕೂಡ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 153/1 ರಲ್ಲಿ ಯಾವುದೇ ರಸ್ತೆ ಇಲ್ಲದಿದ್ದರೂ ಕೂಡ ರಸ್ತೆ ಇದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕುಮ್ಮಕ್ಕಿನ ಮೇರೆಗೆ ಪಂಚಾಯತಿಯವರು ವಾದಿಗೆ ಸೇರಿದ ಸರ್ವೆ ನಂಬರ್ 154/3 ರಲ್ಲಿರುವ ಅವರ ಖಾಸಗಿ ರಸ್ತೆಯನ್ನು ಸಾರ್ವಜನಿಕ ರಸ್ತೆ ಮಾಡಲು ಪ್ರಯತ್ನ ಪಡುತ್ತಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 153/1ರಲ್ಲಿ ರಸ್ತೆ ಮಾಡುವಂತೆ ನೀವು ಕೇಳಿಕೊಳ್ಳದೆ ಇದ್ದರೂ ಕೂಡ ವಾದಿಗೆ ಸೇರಿದ ಸರ್ವೆ ನಂಬರ್ 154/3 ರಲ್ಲಿ ಸಾರ್ವಜನಿಕ ರಸ್ತೆ ಮಾಡುವಂತೆ ನೀವು ಕುಮ್ಮಕ್ಕು ಮಾಡುತ್ತಿದ್ದೀರಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸರ್ವೆ ನಂಬರ್ 153/1 ರಲ್ಲಿ ರಸ್ತೆ ಮಾಡುವಂತೆ ಕೇಳಿಕೊಂಡಿದ್ದೆ ಎನ್ನುತ್ತಾರೆ.

ಈ ದಾವೆಯಲ್ಲಿ ನಾನು ಪ್ರತಿವಾದಿ 4 ಮತ್ತು 5 ರವರ ಪರವಾಗಿ ಕೂಡ ಸಾಕ್ಷಿ ನುಡಿಯುತ್ತಿದ್ದೇನೆ. ಸದರಿ ಪ್ರತಿವಾದಿ 4 ಮತ್ತು 5 ರವರು ನನಗೆ ಆ ರೀತಿ ಸಾಕ್ಷಿ ನುಡಿಯಲು ಯಾವುದೇ ಅಧಿಕಾರ ನನಗೆ ನೀಡಿಲ್ಲ ಎಂದರೆ ಸರಿ. ಸರ್ವೆ ನಂಬರ್ 153/1 ಜಮೀನು 5ನೇ ಪ್ರತಿವಾದಿಗೆ ಸೇರಿದ್ದಾಗಿದ್ದು, ಅವರು ಬಂದು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದರೆ ನಿಜಾಂಶ ಹೊರಬರುತ್ತದೆ ಎಂದು ಹೇಳಿ ನಾನು ಈ ದಾವೆಯಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ನಾನು 5ನೇ ಪ್ರತಿವಾದಿ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುತ್ತಾರೆ. ಸರ್ವೆ ನಂಬರ್ 149/3 ಹಾಗೂ ಸರ್ವೆ ನಂಬರ್ 153/1 ಜಮೀನುಗಳು ಕುಲ್ಲಚೆಟ್ಟೀರಾ ಕುಟುಂಬಕ್ಕೆ ಅಂದರೆ ನನ್ನ ಅಜ್ಜಿ (ತಂದೆಯ ತಾಯಿ) ಗೆ ಸೇರಿದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನುಗಳನ್ನು ನನ್ನ ತಂದೆ ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ಜಮೀನುಗಳ ಬಾಪ್ತು ಕ್ರಯಪತ್ರಗಳು ನಿಮ್ಮ ಬಳಿ ಇದೆಯಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ವಾದಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಮಡಿಕೇರಿ.